**ದಿನಾಂಕಃ25.06.2025 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎನ್.ಟಿ.ಎಸ್. ವಕೀಲರಿಂದಃ–**

1. ನನ್ನನ್ನು ರಂಗಪ್ಪ ಎಂದೂ ಸಹ ಕರೆಯುತ್ತಾರೆ. ಪಹಣಿ ಪತ್ರಿಕೆಯಲ್ಲಿ ರಂಗಪ್ಪ ಎಂದು ಇದೆ. ನಾನು ರಂಗಸ್ವಾಮಿ ಎಂದು ಸಹಿ ಮಾಡುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ತಕರಾರು ಸಲ್ಲಿಸಲು ಹನುಮಂತಪ್ಪನವರು ಮಾಹಿತಿ ಸಲ್ಲಿಸಿರುತ್ತಾರೆ. ನನ್ನ ತಕರಾರಿನಲ್ಲಿ ನನ್ನ ಸಹಿ ಇದ್ದು ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಚಾರಗಳು ನನಗೆ ಗೊತ್ತಿಲ್ಲ.

2. ನನ್ನ ಕುಟುಂಬ ಮೂಲ ಪುರುಷ ಬುರುಜನಮಲ್ಲಪ್ಪನವರನ್ನು ಎ.ಕೆ.ಹನುಮಂತಪ್ಪ ಎಂದೂ ಸಹ ಕರೆಯುತ್ತಿದ್ದರು ಎಂದರೆ ಸರಿ. ವಾದಿ ಮತ್ತು ನಾವು ಒಟ್ಟು ಕುಟುಂಬದ ಸದಸ್ಯರು ಎಂದರೆ ಸರಿ. ಬುರುಜನಮಲ್ಲಪ್ಪನವರಿಗೆ ಸರ್ವೆ ನಂಬರ್ಃ368 ರಲ್ಲಿ 5 ಎಕರೆ ಜಮೀನು, ಸರ್ವೆ ನಂಬರ್ಃ53/1 ರಲ್ಲಿ 39 ಗುಂಟೆ, ಸರ್ವೆ ನಂಬರ್ಃ151/2 ರಲ್ಲಿ 5 ಎಕರೆ 12 ಗುಂಟೆ ಜಮೀನು, ಸರ್ವೆ ನಂಬರ್ಃ268 ರಲ್ಲಿ 5 ಎಕರೆ 18 ಗುಂಟೆ ಜಮೀನು ಇರುತ್ತವೆ. ಸದರಿ ಜಮೀನುಗಳು ಗೋಮಾಳದ ಜಮೀನುಗಳಾಗಿರುತ್ತವೆ.

3. ದಾವಾ ಐಟಂ ನಂಃ1 ರ ಜಮೀನು ಎ.ಕೆ. ಹನುಮಂತಪ್ಪನವರಿಗೆ ದರಕಾಸ್ತ್ ಮೂಲಕ ಬಂದಿರುತ್ತದೆ ಎಂದರೆ ಸರಿ. ಸರ್ವೆ ನಂಬರ್ಃ151/2 ರಲ್ಲಿ 5 ಎಕರೆ 12 ಗುಂಟೆ ಜಮೀನು ಪಿತ್ರಾರ್ಜಿತವಾದ ಜಮೀನು ಎಂದರೆ ಸಾಕ್ಷಿಯು ಗೋಮಾಳದ ಜಮೀನು ಎಂದು ನುಡಿಯುತ್ತಾರೆ. ದಾವಾ ಐಟಂ ನಂಃ2 ರ ಜಮೀನನ್ನು ವಾದಿಯ ತಂದೆ ಓಬಣ್ಣ ಮತ್ತು ಸಂಜೀವಪ್ಪನವರು ಖರೀದಿ ಮಾಡಿದ್ದರು ಎಂದರೆ ಸಾಕ್ಷಿಯು ಒಟ್ಟು ಕುಟುಂಬದಲ್ಲಿದ್ದಾಗ ಖರೀದಿಸಲಾಗಿದೆ ಎಂದು ಸ್ವಇಚ್ಛೆಯಿಂದ ನುಡಿಯುತ್ತಾರೆ.

4. ಬುರುಜನಮಲ್ಲಪ್ಪನವರಿಗೆ ಇಬ್ಬರು ಪತ್ನಿಯರು ಎಂದರೆ ಸರಿ. ಅವರುಗಳೆಂದರೆ ಮೊದಲನೆಯವರು ತೋಪಮ್ಮ ಮತ್ತು ಎರಡನೆಯವರು ಕೆಂಚಮ್ಮ ಎಂದರೆ ಸಾಕ್ಷಿಯು ಮೊದಲನೆಯವರು ಕೆಂಚಮ್ಮ ಮತ್ತು ಎರಡನೆಯವರು ತೋಪಮ್ಮ ಎಂದು ನುಡಿಯುತ್ತಾರೆ. ತೋಪಮ್ಮನವರಿಗೆ ಸಣ್ಣ ಹನುಮಪ್ಪ ಎನ್ನುವ ಮಗ ಇದ್ದರು ಎಂದರೆ ಸರಿಯಲ್ಲ. ಸಣ್ಣ ಹನುಮಪ್ಪನವರಿಗೆ ನಾನು, 1 ಮತ್ತು 2 ನೇ ಪ್ರತಿವಾದಿಯರು ಮಕ್ಕಳು ಎಂದರೆ ಸರಿ. ಕೆಂಚಮ್ಮನವರಿಗೆ ಸಂಜೀವಪ್ಪ, ಓಬಣ್ಣ ಮತ್ತು ಬುಡಿಕೆಂಚಪ್ಪ ಎಂಬ ಮಕ್ಕಳು ಇದ್ದಾರೆ ಎಂದರೆ ಸರಿಯಲ್ಲ. ಓಬಣ್ಣನ ಮಗ ವಾದಿ ರಾಮಚಂದ್ರಪ್ಪ ಎಂದರೆ ಸರಿ.

5. ಬುರುಜನಮಲ್ಲಪ್ಪನವರಿಗೆ ಒಟ್ಟು 4 ಜನ ಮಕ್ಕಳು ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಯರು ಕೆಂಚಮ್ಮನ ಮಕ್ಕಳು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. 1 ರಿಂದ 3 ನೇ ಪ್ರತಿವಾದಿಯರು ತೋಪಮ್ಮನ ಮಕ್ಕಳು ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ-ಸವಾಲಿಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಅವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,. ಹಿರಿಯೂರು.